ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ : ತಾಂ.ಶಿ.ಇ 28 ಸಿಡಿಸಿ(1) 2022 (ಕ.ಸಂ:935209)

ಆಯುಕ್ತರ ಕಛೇರಿ ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-೫೬೦೦೦೧,
ದಿನಾಂಕ: 13/03/2023

:ಜ್ಞಾಪನ:

ವಿಷಯ: ಅಂತಿಮ ವರ್ಷದ ಡಿಪ್ಲೊಮಾ ವಿದ್ಯಾರ್ಥಿಗಳು Internship Programme/Project ಮಾಡಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ವಿವಿಧ ಸರ್ಕಾರಿ ಪಾಲಿಟೆಕ್ನಿಕ್ ಪ್ರಾಚಾರ್ಯರುಗಳಿಂದ ಸ್ವೀಕೃತಗೊಂಡ ಪ್ರಸ್ತಾವನೆಗಳು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿವಿಧ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯರುಗಳು C-20 ಪಠ್ಯಕ್ರಮದನುಸಾರ ಅಂತಿಮ ವರ್ಷದ ಡಿಪ್ಲೊಮಾ ವ್ಯಾಸಂಗದ 6ನೇ ಸೆಮಿಸ್ಟರ್ ನಲ್ಲಿನ ವಿದ್ಯಾರ್ಥಿಗಳು ಆಯಾ ಕೋರ್ಸ್ ಗಳಿಗೆ ಸಂಬಂಧಪಟ್ಟಂತೆ, 16 ವಾರಗಳ (4 ತಿಂಗಳು) ಅವಧಿಗೆ ಇಂಟರ್ನ ಶಿಫ್/ಪ್ರಾಜೆಕ್ಟ್ ಅನ್ನು ಮಾಡಬೇಕಾಗಿರುವುದರಿಂದ ಇಲಾಖಾ ಅನುಮತಿ ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ, ಡಿಪ್ಲೋಮಾ ವ್ಯಾಸಂಗದ 6ನೇ ಸೆಮಿಸ್ಟರ್ ನಲ್ಲಿನ ವಿದ್ಯಾರ್ಥಿಗಳು ಆಯಾ ಕೋರ್ಸ್ ಗಳಿಗೆ ಸಂಬಂಧಪಟ್ಟಂತೆ, ರಾಜ್ಯದಲ್ಲಿ ಅಥವಾ ಹೊರರಾಜ್ಯದಲ್ಲಿ 16 ವಾರಗಳ (4 ತಿಂಗಳು) ಅವಧಿಗೆ ಇಂಟರ್ನ ಶಿಫ್/ಪ್ರಾಜೆಕ್ಟ್ ಅನ್ನು ಮಾಡಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಾಚಾರ್ಯರ ಹಂತದಲ್ಲಿಯೇ ಅಗತ್ಯ ಕ್ರಮವಹಿಸಲು ಅನುಮತಿ ನೀಡಲಾಗಿದೆ.

**ಷರತ್ತುಗಳು:-**

1. ಸಂಸ್ಥೆಯ ಪ್ರಾಂಶುಪಾಲರು, Internship Programme/Project ನಲ್ಲಿ ಭಾಗವಹಿಸಲು ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸುರಕ್ಷತೆ ಮತ್ತು ವಸತಿಯ ಬಗ್ಗೆ ನಿಗಾವಹಿಸುವುದು.
2. Internship Programme/Project ನಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಂದ ಮತ್ತು ಪೋಷಕರಿಂದ ಸುರಕ್ಷತಾ ಕ್ರಮಗಳನ್ನು ಪಾಲಿಸುವ/ಅಹಿತಕರ ಘಟನೆ ನೆಡೆಯದಂತೆ ಕ್ರಮವಹಿಸುತ್ತೇವೆಂಬ ಬಗ್ಗೆ ಮುಚ್ಚಳಿಕೆ ಪತ್ರ ಪಡೆಯುವುದು.
3. ಸಂಬಂಧಪಟ್ಟ ವಿಭಾಗಾಧಿಕಾರಿಗಳು/ಉಪನ್ಯಾಸಕರುಗಳು Internship Programme/Project ನಲ್ಲಿ ಭಾಗವಹಿಸುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ ಕಾಲಕಾಲಕ್ಕೆ ಪ್ರಗತಿಯ ವರದಿಯನ್ನು ಪಡೆದು ಸಂಸ್ಥೆಯ ಪ್ರಾಂಶುಪಾಲರಿಗೆ ಸಲ್ಲಿಸುವುದು.

'ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ'

ಜಂಟಿ ನಿರ್ದೇಶಕರು-ಸಿಡಿಸಿ

ಇವರಿಗೆ: ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ- ಅಗತ್ಯ ಕ್ರಮಕ್ಕೆ.

ಪ್ರತಿ: 1. ಮಾನ್ಯ ಆಯುಕ್ತರ ಆಪ್ತ ಶಾಖೆ- ಮಾಹಿತಿಗಾಗಿ.
2. ನಿರ್ದೇಶಕರ ಆಪ್ತ ಶಾಖೆ- ಮಾಹಿತಿಗಾಗಿ.
3. ಸಹಾಯಕ ನಿರ್ದೇಶಕರು(ಎ.ಸಿ.ಎಂ೦, ತಾಂ.ಶಿ.ಇ-ಸೂಕ್ತ ಕ್ರಮಕ್ಕಾಗಿ.
3. ಇ-ಆಡಳಿತ ವಿಭಾಗ- ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು.
4. ಕಡತಕ್ಕೆ.